


ಹೋಗಲಿಲ್ಲವಾದರೂ, ಈ ದೇಶ ತಮ್ಮ ಧರ್ಮವನ್ನು ಪಾಲಿಸಿ ಸಂಪ್ರದಾಯಗಳನ್ನು ಅನುಸರಿಸುತ್ತಲೇ ಇರಲು ಅನುವು ಮಾಡಿಕೊಡುತ್ತದೆಂದು ಇಲ್ಲೇ ಉಳಿದವರು. ಅವರುಗಳ ಸವಾಲು ಮತ್ತು ಹೆಣಗಾಟವೇ ಬೇರೆ. ಎರಡನೆಯ ವರ್ಗದವರನ್ನು ರಾಷ್ಟ್ರವಾದಿಗಳೆಂದು ಅನಿಲ್ ಕರೆಯುತ್ತಾರೆ. ಧರ್ಮ ಮುಖ್ಯವಾದರೂ, ದೇಶ ಅದಕ್ಕಿಂತ ಮುಖ್ಯವೆಂದು ನಂಬಿ, ದೇಶಹಿತದಲ್ಲಿ ಅನೇಕ ರಾಜಿಗಳನ್ನು ಮಾಡಿ ಮುಂದುವರೆದ ಗುಂಪು ಇದು (ಮೌಲಾನಾ ಅಬುಲ್ ಕಲಾಂ, ಎಂ.ಸಿ. ಚಾಗ್ಲಾ). ಮೂರನೆಯ ವರ್ಗದವರು ಆಧುನಿಕತೆಯನ್ನು ಅಪ್ಪಿದವರು. ಅವರು ಮುಸ್ಲಿಂ ಧರ್ಮದಲ್ಲಿ ಹುಟ್ಟಿದರೂ, ಧರ್ಮಕ್ಕೆ ಪ್ರಾಥಮಿಕ ಆದ್ಯತೆ ಕೊಡದೇ, ಮುಖ್ಯಧಾರೆಯೊಂದಿಗೆ ಬೆರೆತುಹೋಗಲು ಯತ್ನಿಸಿದವರು. ಈ ಮೂರೂ ದೃಷ್ಟಿಕೋನಗಳಿಂದ ಮುಸ್ಲಿಂ ಸಮುದಾಯದ ರಾಜಕೀಯವನ್ನು ಈ ಪುಸ್ತಕ ನೋಡುತ್ತದೆ.

ಅಲ್ಪಸಂಖ್ಯಾತರೂ, ಹೆಚ್ಚಿನಂಶ ಬಡವರ್ಗಕ್ಕೂ ಸೇರಿದ ಮುಸ್ಲಿಂ ಸಮುದಾಯವನ್ನು ಮುಖ್ಯಧಾರೆಯಲ್ಲಿ ಒಳಗೊಳ್ಳುವುದರಲ್ಲಿ ಎರಡು ನೆಲೆಗಳಿವೆ. ಚುನಾವಣೆ ಮತ್ತು ಪ್ರಾತಿನಿಧ್ಯಕ್ಕೆ ಸಂಬಂಧಿಸಿದ್ದು ಒಂದಾದರೆ, (ಉರ್ದು) ಭಾಷೆ ಒಂದು ಕೋಮಿನೊಂದಿಗೆ ಗುರುತಿಸಿಕೊಳ್ಳುವ ಪ್ರಕ್ರಿಯೆಯಿಂದಾಗುವ ಜಟಿಲತೆಗೆ ಸಂಬಂಧಿಸಿದ್ದು ಎರಡನೆಯದ್ದು. 1946ರಲ್ಲಾದ ಕೇಂದ್ರೀಯ ಮತ್ತು ಪ್ರಾಂತೀಯ ವಿಧಾನಸಭೆಗಳ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯಕ್ಕೇ ಮೀಸಲಿಟ್ಟ ಭಿನ್ನ ಕ್ಷೇತ್ರಗಳಿದ್ದುವು. ಈ ಚುನಾವಣೆಯಲ್ಲಿ ಗೆದ್ದು ಬಂದ ಪ್ರತಿನಿಧಿಗಳೇ ಸಂವಿಧಾನ ಸಭೆಯನ್ನು ರೂಪಿಸಿ ಹೊಸ ಸಂವಿಧಾನವನ್ನು ರಚಿಸಬೇಕಿತ್ತು. ಮುಸ್ಲಿಂ ಮತದಾರರಿಗೆ ಮೀಸಲಾದ ಕ್ಷೇತ್ರಗಳಲ್ಲಿ (ಕಾಂಗ್ರೆಸ್ ಪಕ್ಷದ ಮುಸ್ಲಿಂ ಅಭ್ಯರ್ಥಿಗಳಿದ್ದಾಗ್ಯೂ) ಮುಸ್ಲಿಂ ಲೀಗ್‌ನ ಅಭ್ಯರ್ಥಿಗಳೇ ಹೆಚ್ಚಿನಂಶ ಗೆದ್ದರೆ, ಮಿಕ್ಕ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಹೆಚ್ಚಾಗಿ ಗೆದ್ದಿದ್ದರು. ಈ ಚುನಾವಣೆಯ ಫಲಿತಾಂಶದ ನಂತರ ಮುಸ್ಲಿಂ ಬಾಹುಳ್ಯವಿದ್ದ ಪ್ರದೇಶಗಳ ಪ್ರತಿನಿಧಿಗಳು ವಿಭಜನೆಯ ಬೇಡಿಕೆಯನ್ನು ಗಟ್ಟಿಯಾಗಿ ಪ್ರತಿಪಾದಿಸಿದರು. ಹೀಗಾಗಿ ವಿಭಜನೋತ್ತರ ಸಂವಿಧಾನ ಸಭೆಯಲ್ಲಿ ಮುಸ್ಲಿಂ ಪ್ರಾತಿನಿಧ್ಯ ಸಾಕಷ್ಟಿರಲಿಲ್ಲ. ಸಂಪ್ರದಾಯವಾದಿ ಮುಸ್ಲಿಮರೆಲ್ಲ ಪಾಕಿಸ್ತಾನದ ಕಡೆಗೆ ಹೋದರೆ, ರಾಷ್ಟ್ರವಾದಿ ಮುಸ್ಲಿಮರು ಅಲ್ಪಸಂಖ್ಯಾತರಾಗಿ ಸಭೆಯಲ್ಲಿದ್ದರೂ, ಮುಸ್ಲಿಮರ ಪ್ರಾತಿನಿಧ್ಯ ಜನಸಂಖ್ಯೆಯ ಅನುಪಾತದಲ್ಲಿರಲಿಲ್ಲ ಎಂದು ಅನಿಲ್ ವಾದಿಸುತ್ತಾರೆ. ರಾಷ್ಟ್ರವಾದಿ ಮುಸ್ಲಿಂ ನಾಯಕರು ದೇಶಕ್ಕೆ ಬದ್ಧತೆಯನ್ನು ತೋರುವ ಉತ್ಸಾಹದಲ್ಲಿ ಮುಸ್ಲಿಮರ ಪ್ರಾತಿನಿಧ್ಯವನ್ನು ಉಳಿಸಿಕೊಳ್ಳುವ ಕೆಲಸವನ್ನು ಸಶಕ್ತವಾಗಿ ಮಾಡಲಿಲ್ಲ.

ಸಂವಿಧಾನ ಸಭೆ ಮತ್ತು ನಂತರದ ರಾಜಕಾರಣದಲ್ಲಿ ದಲಿತರ ಮತ್ತು ಮುಸ್ಲಿಮರ ಪ್ರಾತಿನಿಧ್ಯದ ಭಿನ್ನತೆಯನ್ನು ನಾವು ಪರೀಕ್ಷಿಸಿ ನೋಡಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ಮುಸ್ಲಿಮರಿಗೆ ಇದ್ದ ಪ್ರತ್ಯೇಕ ಚುನಾವಣಾ ಕ್ಷೇತ್ರ ಮತ್ತು ಪ್ರತ್ಯೇಕ ಧರ್ಮಾಧಾರಿತ ಓಟುದಾರರ ಪಟ್ಟಿಯ ರೀತಿಯಲ್ಲಿಯೇ ದಲಿತರಿಗೂ ಭಿನ್ನವಾದ ಎಲೆಕ್ಟ್ರೇಟ್ ಇರಬೇಕೆಂದು ಅಂಬೇಡ್ಕರ್ ವಾದಿಸಿದ್ದರು. ಆದರೆ ಪೂನಾ ಒಪ್ಪಂದದಲ್ಲಿ ಈ ಬೇಡಿಕೆಯನ್ನು ಅಂಬೇಡ್ಕರ್ ಅವರ ಮನಸ್ಸಿಗೆ ವಿರುದ್ಧವಾಗಿ ಮಹಾತ್ಮಾ ಗಾಂಧಿಯವರಿಂದಾಗಿ ಕೈಬಿಡಲಾಯಿತು. ಚುನಾವಣೆಯ ನಂತರ ಸ್ಥಾಪಿಸಿದ ಸಂವಿಧಾನ ಸಭೆಯ ಅಧ್ಯಕ್ಷರಾಗಿದ್ದ ಅಂಬೇಡ್ಕರ್ ದಲಿತರ ವಕಾಲತ್ತನ್ನು ಸಶಕ್ತವಾಗಿ ಕೈಹಿಡಿದರು. ಪ್ರತ್ಯೇಕ ಎಲೆಕ್ಟ್ರೇಟ್